ಬಂದಿದ್ದು ಒಳ್ಳೆಯದಾಯಿತು. ನೀನು ಆ ಮರದ ಕೊಂಬೆಯಲ್ಲಿ ನೇತಾಡುತ್ತಿರುವ ನನ್ನ ಪಂಜರವನ್ನು ನೋಡಿದ್ದೀಯ? ನೋಡು, ಆ ಕೊಂಬೆಗೆ ಹತ್ತಿದ ಬಳ್ಳಿ ಮತ್ತು ಅದರ ನೀಲಿ ಬಣ್ಣದ ಹೂವುಗಳಿಂದ ಪಂಜರ ಎಷ್ಟು ಅಲಂಕೃತವಾಗಿದೆ?"

"ಬಾಗಿಲು ತೆರೆದಿರುವ ಆ ಪಂಜರ ಯಾರಿಗಾಗಿ?"

"ನಾನು ಅದರಲ್ಲಿ ಗಿಳಿಯೊಂದು ಬರುವುದನ್ನು ಕಾಯುತ್ತಿದ್ದೇನೆ."

"ಬಹುಶಃ ಆ ಪಂಜರ ಗಿಳಿಯೊಂದು ತಾನೇ ಬಂದು ಕೂರುವುದಕ್ಕಾಗಿದೆಯೇ?" ಎನ್ನುತ್ತಾ ಪಂಜರವನ್ನು ನೋಡಿದೆ.

"ಹೌದು, ಅದಕ್ಕೇ ನಾನು ಪಂಜರದ ಬಾಗಿಲನ್ನು ತೆರೆದಿಟ್ಟಿದ್ದೇನೆ. ಪಂಜರದಲ್ಲಿ ಗಿಳಿಗಾಗಿ ತಾಜಾ ಹಣ್ಣುಗಳನ್ನಿಟ್ಟಿದ್ದೇನೆ. ಸೂರ್ಯಕಾಂತಿಯ ಬೀಜಗಳನ್ನು ಇಟ್ಟಿದ್ದೇನೆ, ಬಟ್ಟಲಿನಲ್ಲಿ ನೀರಿಟ್ಟಿದ್ದೇನೆ. ಇವನ್ನೆಲ್ಲಾ ವಾರದ ಬಳಿಕ ಬದಲಾಯಿಸುತ್ತೇನೆ. ಹಳಸಿದ ಅನ್ನವನ್ನು ತಿನ್ನಲು ಯಾರು ಬರುತ್ತಾರೆ?"

"ಕೈಟಿ, ಜೀವಮಾನವಿಡಿ ಬಂದಿಯಾಗಿರಲು ಯಾವ ಗಿಳಿ ತಾನೇ ಇಷ್ಟಪಡುತ್ತೆ?"

"ಒಂದಲ್ಲ ಒಂದು ದಿನ ಗಿಳಿ ಬಂದೇ ಬರುತ್ತೆ. ಇದು ಸಾಮಾನ್ಯ ಪಂಜರವಲ್ಲ. ಇಲ್ಲಿ ನೋಡು."

ನಾನು ಅವಳನ್ನು ನೋಡಿದೆ, ಅವಳು ಬೆರಗಾಗಿ ತನ್ನ ತುಟಿಗಳನ್ನು ನಾಲಿಗೆಯಿಂದ ಸವರಿಕೊಂಡಳು, ಕೆಳಗಿನಿಂದ ರವಿಕೆಯನ್ನು ಎಳೆದುಕೊಂಡಳು. ರವಿಕೆಯ ಕತ್ತಿನ ಉದ್ದ ಇನ್ನಷ್ಟು ಹೆಚ್ಚಿತು. ಅಲ್ಲಿ ನನಗೇನು ಕಂಡಿತ್ತೋ, ಹೇಳಲಾರೆ. ಕೈಟಿ ತನ್ನ ನಗ್ನ ಭುಜಗಳು ಮತ್ತು ಎದೆಯನ್ನು ಸವರಿಕೊಂಡಳು. ಅವಳ ಕೆಂಪು ರವಿಕೆ ಇನ್ನಷ್ಟು ಕೆಂಪಗಾದಂತೆ ಕಂಡಿತು.

"ಅಲ್ಲಿ ನೋಡು, ಐದು ವರ್ಷದ ಸುಂದರ ಬಾಲಕನೊಬ್ಬ ನನ್ನ ಅಂಗಳದಲ್ಲಿ ಆಡುತ್ತಿದ್ದಾನೆ." ಕೈಟಿ ಹೇಳಿದ್ದಳು, "ಅವನು ನನ್ನನ್ನು ಹಿಂಬಾಲಿಸುತ್ತಾನೆ. ಪ್ರತಿ ಎರಡು ಮೂರು ದಿನಗಳಿಗೊಮ್ಮೆ ಅವನು ನನಗೆ ಕಾಣಿಸುತ್ತಾನೆ. ಅವನು ತುಂಬಾ ತುಂಟ, ನನ್ನ ಬಳಿಗೆ ಎಂದೂ ಬರುವುದಿಲ್ಲ".

ಅವಳ ಮನೆಯ ಅಂಗಳವನ್ನು ನೋಡಿದಾಗ ನನಗೆ ಆಶ್ಚರ್ಯವಾಗಿತ್ತು. ಅಲ್ಲಿ ಯಾವ ಬಾಲಕನೂ ಇರಲಿಲ್ಲ. ಅಂಗಳ ಶೂನ್ಯವಾಗಿತ್ತು. ಅಲ್ಲಿಲ್ಲದ ಬಾಲಕ ಕೈಟಿಗೆ ಹೇಗೆ ಕಾಣ ಬರುತ್ತಿದ್ದ! ಪಂಜರದ ಬಗ್ಗೆ ಮಾತನಾಡುವಾಗ ಅವಳಲ್ಲಿ ಅವಳೇ ಇಲ್ಲದಂತೆ ತೋರುತ್ತಿದ್ದಳು.

ನಾವಿಬ್ಬರು ಸ್ವಲ್ಪ ಹೊತ್ತು ಮೌನವಾಗಿದ್ದೆವು. ಈ ಮೌನದ ನಡುವೆ ಇಲೇನ್ ಕುಂಟುತ್ತಿರುವುದನ್ನು ನೋಡಿದೆ. "ಸರಿ ಕೈಟಿ, ನಾನಿನ್ನು ಬರುತ್ತೇನೆ." ನಾನು ಎರಡು ಹೆಜ್ಜೆಗಳನ್ನು ಮುಂದಿಟ್ಟಿದ್ದೆ, ಆಗಲೇ ಅವಳು ಹೇಳಿದಳು, "ಸ್ವಲ್ಪ ನಿಲ್ಲು. ಇನ್ನೂ ಪಂಜರದ ಮಾತು ಮುಗಿದಿಲ್ಲ, ಪಾಲ್! ಬಾ, ಬಂದು ಕುರ್ಚಿಯಲ್ಲಿ ಕೂರು".

ನನಗೆ ಅಲ್ಲಿಂದ ಹೋಗಲು ಮನಸ್ಸಾಯಿತು, ಆದರೆ ಇನ್ನೊಂದು ಮನಸ್ಸಿಗೆ ಕುರ್ಚಿಯಲ್ಲಿ ಕೂತು ಅವಳ ರವಿಕೆ ಮತ್ತು 'ಆಳ ಗಲ್ಲ'ಗಳನ್ನು ಹಾಗೂ ಅವಳ ನಗ್ನ ಬಿಳಿಯ ಭುಜಗಳನ್ನು ನೋಡಲು ಮನಸ್ಸಾಯಿತು. ಹೀಗಾಗಿ, ಮತ್ತೆ ಕುರ್ಚಿಯ ಬಳಿಗೆ ಬಂದು ಕೂತೆ. ಕೈಟಿ ತನ್ನ ಕುರ್ಚಿಯನ್ನು ನನ್ನ ಕುರ್ಚಿಯ ಸಮೀಪಕ್ಕೆ ಸರಿಸಿಕೊಂಡಳು. ಇಬ್ಬರ ಕುರ್ಚಿಗಳ ಕೈಗಳು ಸ್ಪರ್ಶಿಸುತ್ತಿದ್ದವು. ಯಾವ ಮೂರ್ಖ ಕುರ್ಚಿಗೆ ಕೈಗಳನ್ನು ಮಾಡಿದ? ಎಂದು ನಾನು ಯೋಚಿಸುತ್ತಿದ್ದೆ.

"ನಾನು ಗುಡ್‌ವಿಲ್ ರೆಸ್ಟೋರೆಂಟಿಗೆ ಫೋನ್ ಮಾಡಿ ನಮ್ಮಿಬ್ಬರಿಗೆ ಲಂಚ್ ತರಿಸುತ್ತೇನೆ." ಕೈಟಿ ಲಂಚ್‌ಗೆ ಫೋನ್ ಮಾಡಿದಳು.

ಗಿಳಿಯ ಬಗ್ಗೆ ಅವಳ ಮಾತುಗಳು ಕುತೂಹಲಕಾರಿಯಾಗಿದ್ದವು. ಅಷ್ಟರಲ್ಲಿ ಅವಳು ಹೇಳಿದಳು, "ಗಿಳಿಗಳಿಗೆ ಅದೆಷ್ಟು ಹುಚ್ಚು! ಪಂಜರ ಅದೆಷ್ಟು ಸುಂದರವಾಗಿದೆ, ಆದರೆ ಒಂದೂ ಗಿಳಿ ಇದುವರೆಗೆ ಬರಲಿಲ್ಲ. ಒಂಟಿಯಾಗುವುದೆಂದರೆ, ಕ್ಷಣ ಕ್ಷಣವೂ ಸಾಯುವುದಾಗಿದೆ. ಒಂದು ಬಾರಿ ಗಿಳಿ ಸಿಕ್ಕರೆ,